# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಸರ್ಕಾರಿ ವೆಚ್ಚದಲ್ಲಿ ಸಚಿವರು/ಅಧಿಕಾರಿಗಳು ದಿನಪತ್ರಿಕೆ ಮತ್ತು ನಿಯತಕಾಲಿಕೆಗಳನ್ನು ಪಡೆಯುವ ಬಗ್ಗೆ.

ಓದಲಾಗಿದೆ:
(1) ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 4 ಎಲ್‌ಬಿಪಿ 80 ದಿ: 9–4–80
(2) ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 6 ಎಲ್‌ಬಿಪಿ 83 ದಿ: 28–2–85
(3) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 14 ಸಗ್ರನಿ 96 ದಿ: 22–5–96
(4) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 9 ಸಗ್ರನಿ 98 ದಿ: 17–2–98
(5) ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರ ಪತ್ರ ಸಂಖ್ಯೆ: ಕಅಪ್ರಾ/ಅ/655/97 ದಿನಾಂಕ 16–6–97.

-------

ಪ್ರಸ್ತಾವನೆ:

ಮೇಲೆ ಓದಲಾಗಿರುವ ಸರ್ಕಾರಿ ಆದೇಶಗಳಲ್ಲಿ ಮುಖ್ಯ ಮಂತ್ರಿಗಳಿಗೆ, ಮಂತ್ರಿಗಳಿಗೆ ಹಾಗೂ ಸಚಿವಾಲಯದ ಅಧಿಕಾರಿಗಳಿಗೆ ಕಛೇರಿ ಉಪಯೋಗಕ್ಕಾಗಿ ಈ ಕೆಳಗಿನಂತೆ ದಿನಪತ್ರಿಕೆ/ನಿಯತಕಾಲಿಕೆಗಳನ್ನು ತರಿಸಿಕೊಳ್ಳಲು ಸರ್ಕಾರ ಮಂಜೂರಾತಿ ನೀಡಿತ್ತು.

| | |
|---|---|
| 1) ಮುಖ್ಯ ಮಂತ್ರಿಯವರ ಕಾರ್ಯಾಲಯ | 125 ಪತ್ರಿಕೆಗಳು (ದಿನಪತ್ರಿಕೆ ಮತ್ತುನಿಯತಕಾಲಿಕೆಗಳು ಸೇರಿ) |
| 2) ಸಂಪುಟ ದರ್ಜೆ ಸಚಿವರು | 15 ಪತ್ರಿಕೆಗಳು (ದಿನಪತ್ರಿಕೆ ಮತ್ತು ನಿಯತಕಾಲಿಕೆಗಳು ಸೇರಿ) |
| 3) ರಾಜ್ಯ ಸಚಿವರು/ಉಪ ಸಚಿವರು | 10 ಪತ್ರಿಕೆಗಳು (ದಿನಪತ್ರಿಕೆಗಳು ಮತ್ತು ನಿಯತಕಾಲಿಕೆಗಳು ಸೇರಿ) |
| 4)ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ಮತ್ತು ಅಪರ ಮುಖ್ಯ ಕಾರ್ಯದರ್ಶಿಗಳ ಮಟ್ಟದ ಅಧಿಕಾರಿಗಳು | 4 ದಿನಪತ್ರಿಕೆಗಳು<br>4 ನಿಯತಕಾಲಿಕೆಗಳು (ಈ ಪೈಕಿ 2ಕ್ಕಿಂತ ಹೆಚ್ಚು ನಿಯತಕಾಲಿಕೆಗಳು ವಿದೇಶಿಯದ್ದಾಗಿರಬಾರದು) |
| 5) ಸರ್ಕಾರದ ಕಾರ್ಯದರ್ಶಿಗಳು | 3 ದಿನಪತ್ರಿಕೆಗಳು<br>3 ನಿಯತಕಾಲಿಕೆಗಳು (ಈ ಪೈಕಿ 1ಕ್ಕಿಂತ ಹೆಚ್ಚು ನಿಯತಕಾಲಿಕೆಗಳು ವಿದೇಶಿಯದ್ದಾಗಿರಬಾರದು) |
| 6) ಸರ್ಕಾರದ ವಿಶೇಷ ಕಾರ್ಯದರ್ಶಿಗಳು/ಅಪರ ಕಾರ್ಯದರ್ಶಿಗಳು/ಸಹ ಕಾರ್ಯದರ್ಶಿಗಳು | 2 ದಿನಪತ್ರಿಕೆಗಳು<br>2 ಸ್ಥಳೀಯ ನಿಯತಕಾಲಿಕೆಗಳು |
| 7) ಸರ್ಕಾರದ ಉಪ ಕಾರ್ಯದರ್ಶಿಗಳು | 2 ದಿನಪತ್ರಿಕೆಗಳು<br>1 ಭಾರತೀಯ ನಿಯತಕಾಲಿಕೆ |

ಮೇಲೆ ಓದಲಾದ ಅ.ಸಂಖ್ಯೆ: 5ರ ಪತ್ರದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷರು ಆಡಳಿತದ ಎಲ್ಲಾ ಹಂತಗಳಲ್ಲಿ ಕನ್ನಡವನ್ನೇ ಬಳಸಬೇಕೆಂಬ ಭಾಷಾ ನೀತಿಯ ಹಿನ್ನಲೆಯಲ್ಲಿ ಸಚಿವರು, ಅಧಿಕಾರಿಗಳು ಸರ್ಕಾರಿ ವೆಚ್ಚದಲ್ಲಿ ಪಡೆಯುತ್ತಿರುವ ದಿನಪತ್ರಿಕೆ/ನಿಯತಕಾಲಿಕೆಗಳಲ್ಲಿ ಕನಿಷ್ಠ ಅರ್ಧದಷ್ಟು ದಿನಪತ್ರಿಕೆ/ನಿಯತಕಾಲಿಕೆಗಳು ಕನ್ನಡದವುಗಳಾಗಿರಬೇಕೆಂದು ಸೂಚಿಸಿರುತ್ತಾರೆ.

ಈ ಸಲಹೆಯನ್ನು ಸರ್ಕಾರ ಕೂಲಂಕುಷವಾಗಿ ಪರಿಶೀಲಿಸಿದೆ ಮತ್ತು ಈ ಕೆಳಗಿನಂತೆ ಆದೇಶಿಸಿದೆ.

## ಆದೇಶ ಸಂಖ್ಯೆ: ಸಿಆಸುಇ 17 ಸಗ್ರನಿ 97, ಬೆಂಗಳೂರು ದಿನಾಂಕ: 27ನೇ ಜೂನ್ 1998

ಈ ವಿಷಯದ ಬಗ್ಗೆ ಈ ಹಿಂದೆ ಹೊರಡಿಸಲಾದ ಎಲ್ಲಾ ಆದೇಶಗಳನ್ನು ರದ್ದುಪಡಿಸಿ ಕರ್ನಾಟಕದ ಮುಖ್ಯ ಮಂತ್ರಿಗಳು, ಸಚಿವರು ಹಾಗೂ ಸಚಿವಾಲಯದ ಅಧಿಕಾರಿಗಳು ಕಛೇರಿ ಉಪಯೋಗಕ್ಕಾಗಿ ಈ ಕೆಳಗೆ ತಿಳಿಸಿದಂತೆ ದಿನಪತ್ರಿಕೆ/ನಿಯತಕಾಲಿಕೆ (ಮ್ಯಾಗಜಿನ್) ಗಳನ್ನು ಸರ್ಕಾರಿ ವೆಚ್ಚದಲ್ಲಿ ತರಿಸಿಕೊಳ್ಳಲು ಮಂಜೂರಾತಿ ನೀಡಿದೆ.

| | |
|---|---|
| 1) ಮುಖ್ಯ ಮಂತ್ರಿಗಳ ಕಾರ್ಯಾಲಯ | 125 ಪತ್ರಿಕೆಗಳು (ದಿನಪತ್ರಿಕೆ ಮತ್ತು ನಿಯತಕಾಲಿಕೆಗಳನ್ನು ಒಳಗೊಂಡಂತೆ). |
| 2) ಸಂಪುಟ ದರ್ಜೆ ಸಚಿವರು | 15 ಪತ್ರಿಕೆಗಳು (ಈ ಪೈಕಿ ಕನಿಷ್ಠ ಒಂದು ದಿನಪತ್ರಿಕೆ ಕನ್ನಡದ್ದಾಗಿರಬೇಕು ಹಾಗೂ ಒಂದು ನಿಯತಕಾಲಿಕೆ ಕನ್ನಡದ್ದಾಗಿರಬೇಕು). |
| 3) ರಾಜ್ಯ ಸಚಿವರು | 10 ಪತ್ರಿಕೆಗಳು (ಈ ಪೈಕಿ ಕನಿಷ್ಠ ಒಂದು ದಿನಪತ್ರಿಕೆ ಕನ್ನಡದ್ದಾಗಿರಬೇಕು ಹಾಗೂ ಒಂದು ನಿಯತಕಾಲಿಕೆ ಕನ್ನಡದ್ದಾಗಿರಬೇಕು). |
| 4)ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಮತ್ತು ಅಪರ ಮುಖ್ಯ ಕಾರ್ಯದರ್ಶಿ ಮಟ್ಟದ ಅಧಿಕಾರಿಗಳು | 4 ದಿನಪತ್ರಿಕೆಗಳು (ಈ ಪೈಕಿ ಕನಿಷ್ಠ ಒಂದು ದಿನಪತ್ರಿಕೆ ಕನ್ನಡದ್ದಾಗಿರಬೇಕು).<br>4 ನಿಯತಕಾಲಿಕೆಗಳು (ಈ ಪೈಕಿ ಕನಿಷ್ಠ ಒಂದು ನಿಯತಕಾಲಿಕೆ ಕನ್ನಡದ್ದಾಗಿರಬೇಕು ಮತ್ತು 2ಕ್ಕಿಂತ ಹೆಚ್ಚು ನಿಯತಕಾಲಿಕೆ ವಿದೇಶಿಯದ್ದಾಗಿರಬಾರದು). |
| 5) ಸರ್ಕಾರದ ಕಾರ್ಯದರ್ಶಿಗಳು | 3 ದಿನಪತ್ರಕೆಗಳು (ಈ ಪೈಕಿ ಕನಿಷ್ಠ ಒಂದು ದಿನಪತ್ರಿಕೆ ಕನ್ನಡದ್ದಾಗಿರಬೇಕು).<br>3 ನಿಯತಕಾಲಿಕೆಗಳು (ಈ ಪೈಕಿ ಕನಿಷ್ಠ ಒಂದು ನಿಯತಕಾಲಿಕೆ ಕನ್ನಡದ್ದಾಗಿರಬೇಕು ಮತ್ತು 1ಕ್ಕಿಂತ ಹೆಚ್ಚು ನಿಯತಕಾಲಿಕೆ ವಿದೇಶಿಯದ್ದಾಗಿರಬಾರದು). |
| 6) ಸರ್ಕಾರದ ವಿಶೇಷ ಕಾರ್ಯದರ್ಶಿಗಳು/ಅಪರ ಕಾರ್ಯದರ್ಶಿಗಳು/ಸಹ ಕಾರ್ಯದರ್ಶಿಗಳು | 2 ದಿನಪತ್ರಿಕೆಗಳು (ಈ ಪೈಕಿ ಕನಿಷ್ಠ ಒಂದು ದಿನಪತ್ರಿಕೆ ಕನ್ನಡದ್ದಾಗಿರಬೇಕು).<br>2 ಭಾರತೀಯ ನಿಯತಕಾಲಿಕೆಗಳು (ಈ ಪೈಕಿ ಕನಿಷ್ಠ ಒಂದು ನಿಯತಕಾಲಿಕೆ ಕನ್ನಡದ್ದಾಗಿರಬೇಕು). |
| 7) ಸರ್ಕಾರದ ಉಪ ಕಾರ್ಯದರ್ಶಿಗಳು | 2 ಸ್ಥಳೀಯ ದಿನಪತ್ರಿಕೆಗಳು (ಈ ಪೈಕಿ ಒಂದು ದಿನಪತ್ರಿಕೆ ಕನ್ನಡದ್ದಾಗಿರಬೇಕು).<br>1 ಭಾರತೀಯ ನಿಯತಕಾಲಿಕೆ. |

ಮೇಲಿನ ನಿಬಂಧನೆಗೊಳಪಟ್ಟ ದಿನಪತ್ರಿಕೆ/ನಿಯತಕಾಲಿಕೆಗಳನ್ನು ತರಿಸಿಕೊಳ್ಳಲು ಮತ್ತು ಬಿಲ್‌ನ ಮೇಲೆ ಅಗತ್ಯ ಧೃಢೀಕರಣ ಮಾಡಿ ಸಿಆಸುಇ (ಲೆಕ್ಕಪತ್ರ) ವಿಭಾಗದಿಂದ ಮುಂಗಡ ಹಣ ಪಾವತಿ ಮಾಡಲು ಹಾಗೂ ಹಣ ಮರು ಪಾವತಿ ಮಾಡಿಕೊಳ್ಳಲು (ಯುಕ್ತ ಸಮಯಕ್ಕೊಳಪಟ್ಟು) ಸಂಬಂಧಪಟ್ಟ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ ಹಾಗೂ ಸಚಿವಾಲಯದ ಅಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

ಸಚಿವರಿಗೆ ನಿಯತಕಾಲಿಕೆ/ದಿನಪತ್ರಿಕೆ ತರಿಸುವ ವೆಚ್ಚವನ್ನು: "2013-00-800-0-01-050 ಕಚೇರಿ ವೆಚ್ಚಗಳು" ಶೀರ್ಷಿಕೆಯಡಿಯಲ್ಲಿಯೂ ಹಾಗೂ ಸಚಿವಾಲಯದ ಅಧಿಕಾರಿಗಳ ನಿಯತಕಾಲಿಕೆ/ದಿನಪತ್ರಿಕೆ ವೆಚ್ಚವನ್ನು

ಲೆಕ್ಕ ಶೀರ್ಷಿಕೆ "2052–ಸಚಿವಾಲಯ ಸಾಮಾನ್ಯ ಸೇವೆಗಳು–1–ಸಚಿವಾಲಯ–ಕೆ.ಜಿ.ಎಸ್. 7–ಇತರೆ ವೆಚ್ಚಗಳು" ಶೀರ್ಷಿಕೆಯಡಿಯಲ್ಲಿ ಭರಿಸತಕ್ಕದ್ದು.

ಹಳೆಯ ದಿನಪತ್ರಿಕೆ/ನಿಯತಕಾಲಿಕೆಗಳನ್ನು ಆಯಾ ಕಚೇರಿ ಹಂತದಲ್ಲಿಯೇ ವಿಲೇ ಮಾಡಿಕೊಳ್ಳಬಹುದಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ
ಸಹಿ/–
(ಎಂ.ಎನ್. ಈರೇಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ ಹಾಗೂ
ಮುಖ್ಯ ಗ್ರಂಥಾಧಿಕಾರಿ
ಸಿ.ಆ.ಸು.ಇ (ಗ್ರಂಥಾಲಯ)

ಸಂಖ್ಯೆ: ಸಿಆಸುಇ 17 ಸಗ್ರನಿ 97 ದಿನಾಂಕ: 22–7–1998.

## ತಿದ್ದೋಲೆ

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 17 ಸಗ್ರನಿ 97 ದಿನಾಂಕ: 27–6–98ರಲ್ಲಿ ಸಚಿವಾಲಯದ ಅಧಿಕಾರಿಗಳ ನಿಯತಕಾಲಿಕೆ/ದಿನಪತ್ರಿಕೆ ವೆಚ್ಚವನ್ನು ಲೆಕ್ಕ ಶೀರ್ಷಿಕೆ 2052–ಸಚಿವಾಲಯ ಸಾಮಾನ್ಯ ಸೇವೆಗಳು, 1–ಸಚಿವಾಲಯ–1–ಕೆ.ಜಿ.ಎಸ್. 7–ಇತರೆ ವೆಚ್ಚಗಳು ಶೀರ್ಷಿಕೆಯಡಿಯಲ್ಲಿ ಭರಿಸತಕ್ಕದ್ದು ಎಂಬುದರ ಬದಲಾಗಿ "2052–ಸಚಿವಾಲಯ ಸಾಮಾನ್ಯ ಸೇವೆಗಳು–090–ಸಚಿವಾಲಯ –01–ಕರ್ನಾಟಕ ಸರ್ಕಾರದ ಸಚಿವಾಲಯ–060–ಇತರೆ ವೆಚ್ಚಗಳು" ಶೀರ್ಷಿಕೆಯಡಿಯಲ್ಲಿ ಭರಿಸತಕ್ಕದ್ದು ಎಂದು ಓದಿಕೊಳ್ಳುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ
ಸಹಿ/–
(ಎಂ.ಎನ್. ಈರೇಗೌಡ)
ಮುಖ್ಯ ಗ್ರಂಥಾಧಿಕಾರಿ ಮತ್ತು ಸರ್ಕಾರದ
ಅಧೀನ ಕಾರ್ಯದರ್ಶಿ
ಸಿ.ಆ.ಸು.ಇ (ಗ್ರಂಥಾಲಯ).

ಇವರಿಗೆ:

1. ಮಹಾಲೇಖಪಾಲಕರು, ಕರ್ನಾಟಕ, ಬೆಂಗಳೂರು.
2. ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರು.
3. ಎಲ್ಲಾ ಸಂಪುಟ ದರ್ಜೆ/ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿಗಳು.
4. ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಯವರು.
5. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ/ಆಯುಕ್ತರ ಆಪ್ತ ಕಾರ್ಯದರ್ಶಿಯವರು.
6. ಸರ್ಕಾರದ ಎಲ್ಲಾ ಕಾರ್ಯದರ್ಶಿಯವರು.
7. ಸರ್ಕಾರದ ಎಲ್ಲಾ ಅಪರ/ಸಹ ಕರ್ಯದರ್ಶಿಯವರು.
8. ಸರ್ಕಾರದ ಎಲ್ಲಾ ಉಪ ಕಾರ್ಯದರ್ಶಿಯವರು.
9. ಅಧೀನ ಕಾರ್ಯದರ್ಶಿಯವರು ಸಿಆಸುಇ (ಲೆಕ್ಕಪತ್ರ)/ಆರ್ಥಿಕ ಇಲಾಖೆ (ವೆಚ್ಚ–1).
10. ಸಿಆಸುಇ (ಲೆಕ್ಕಪತ್ರ–2) ಶಾಖೆ.
11. ಉಪ ಗ್ರಂಥಾಧಿಕಾರಿ, ಸಚಿವಾಲಯ ಗ್ರಂಥಾಲಯ, (ವಿಧಾನಸೌಧ) ಬಹುಮಹಡಿ ಕಟ್ಟಡ ಶಾಖೆ.